ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಾಗಮಂಗಲ

ಸಿಸಿ.ನಂ. 623/2013

| | | | |
|---|---|---|---|
| ಸಾಕ್ಷಿದಾರರು | : | ಬಿ.ಕೆ. ಚಂದ್ರಪ್ಪ | |
| ತಂದೆ /ಗಂಡನ ಹೆಸರು | : | ಲೇಃಕೆಂಪಜಪ್ಪ | ಪಿ.ಡಬ್ಲ್ಯೂ : 1 |
| ವಯಸ್ಸು | : | 57 ವರ್ಷ | |
| ವೃತ್ತಿ | : | ಎ.ಎಸ್.ಐ, ನಾಗಮಂಗಲ ಟೌನ್ ಪೋಲಿಸ್ ಠಾಣೆ | |
| ವಾಸ ಸ್ಥಳ | : | ನಾಗಮಂಗಲ | |

ಸಾಕ್ಷಿಯನ್ನು ದಿನಾಂಕ 04.09.2023 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ರವರಿಂದಃ-.

ನಾನು 10.12.2022 ರಿಂದ ನಾಗಮಂಗಲ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ, ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿಯ ಆರೋಪಿ ಯೋಗೇಶ್ ವಿರುದ್ದ ಮಾನ್ಯ ನ್ಯಾಯಾಲಯದಿಂದ ಜಾರಿಯಾದ ಉದ್ಘೋಷಣಾ ಆದೇಶ ಮತ್ತು ಜಪ್ತಿ ವಾರೆಂಟ್ ಜಾರಿ ಮಾಡಲು ನಮ್ಮ ಠಾಣೆಯ ಪಿ.ಎಸ್.ಐ ರವರು ನಿರ್ದೇಶನ ನೀಡಿದ ಮೇರೆಗೆ ದಿಃ22.12.2022 ರಂದು ಆರೋಪಿ ಯೋಗೇಶ್ ವಿಳಾಸವಾದ ಬಿಂಡೇನಳ್ಳಿ ಗ್ರಾಮ , ದೇವಲಪುರ ಹೋಬಳಿ ನಾಗಮಂಗಲ ತಾಲ್ಲೂಕು ಸ್ದಳಕ್ಕೆ ಪಂಚರೊಂದಿಗೆ ಬೇಟಿ ನೀಡಿ ಸಾರ್ವಜನಿಕರು, ಬಾತ್ಮಿದಾರರು ಮತ್ತು ಅಲ್ಲಿಯ ನಿವಾಸಿಗಳ ಹತ್ತಿರ ಆರೋಪಿ ಯೋಗೇಶ್ ಬಗ್ಗೆ ವಿಚಾರ ಮಾಡಿದಾಗ ಆರೋಪಿ ಯೋಗೇಶ್ ಹೆಸರಿನವರು ಯಾರು ಗೊತ್ತಿಲ್ಲ ಹಾಗೂ ಸದರಿ ವಿಳಾಸದಲ್ಲಿ ವಾಸ ಮಾಡುತ್ತಿಲ್ಲ ಎಂದು ಹೇಳಿದರು. ಈ ವಿಚಾರದಲ್ಲಿ ನಾನು ಸದರಿ ಸ್ಥಳದಲ್ಲಿ ದಿಃ22.12.2022 ರಂದು ಬೆಳಗ್ಗೆ 11.30 ರಿಂದ 12.30 ರವರೆಗೆ ಮಹಜರು ಮಾಡಿದ್ದೇನೆ. ಸದರಿ ಮಹಜರಿನಲ್ಲಿ ನನ್ನ ಸಹಿ ಇದೆ. ಮಹಜರು ನಿಪಿ.1 ಸಾಕ್ಷಿಯ ಸಹಿ ನಿಪಿ.1 ಎ ಎಂದು ಗುರುತಿಸಲಾಯಿತು.

ಆರೋಪಿ ಯೋಗೇಶ್ ರವರ ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ವರದಿ ನೀಡುವಂತೆ ಕೋರಿ ತಹಸಿಲ್ದಾರ್ ನಾಗಮಂಗಲ ಮತ್ತು ಗ್ರಾಮಪಂಚಾಯಿತಿ ಬೀಮನಳ್ಳಿ ಗ್ರಾಮರವರಿಗೆ ಮನವಿ ಪತ್ರ ಸಲ್ಲಿಸಿದ್ದು, ಸದರಿಯವರು ಆರೋಪಿ ಯೋಗೇಶ್ ಹೆಸರಿನವರು ಅವರ ವ್ಯಾಪ್ತಿಯಲ್ಲಿ ವಾಸವಾಗಿರುವುದಿಲ್ಲ ಹಾಗೂ ಆರೋಪಿ ಯೋಗೇಶ್ ರವರು ಅವರ ವ್ಯಾಪ್ತಿಯಲ್ಲಿ ಯಾವುದೇ ಚರ ಮತ್ತು ಸ್ಥಿರಾಸ್ತಿಗಳು ಹೊಂದಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಗಳನ್ನು ಹಾಜರು ಪಡಿಸಿದ್ದೇನೆ. ಸದರಿ ವರದಿ ಸಾಕ್ಷಿ ಗುರುತಿಸಿದ್ದರಿಂದ ತಹಸಿಲ್ದಾರವರ ವರದಿಯನ್ನು ನಿಪಿ.2 ಎಂದು ಮತ್ತು ಗ್ರಾಮಪಂಚಾಯಿತಿ ವರದಿ ನಿಪಿ.3 ಎಂದು ಗುರುತಿಸಲಾಯಿತು. ಉದ್ಘೋಷಣಾ ಆದೇಶವನ್ನು ನಾನು ಮಹಜರು ಮಾಡಿದ ಆರೋಪಿ ಯೋಗೇಶ್ ವಿಳಾಸದ ಸ್ಥಳದಲ್ಲಿ, ಬಿಂಡೇನಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ಕಛೇರಿಯ ಮುಂಭಾಗ ಮತ್ತು ನ್ಯಾಯಾಲಯದ ನೋಟಿಸ್ ಬೊರ್ಡ್ ನಲ್ಲಿ ಅಂಟಿಸಿದ್ದೇನೆ ಹಾಗೂ ಆ ಸಮಯದಲ್ಲಿ ಪೋಟೋಗಳನ್ನು ಸಹ ತೆಗೆಸಿರುತ್ತೇವೆ. ಸದರಿ ಪೋಟೋಗಳನ್ನು ಹಾಜರುಪಡಿಸಿರುತ್ತೇನೆ. ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದರಿಂದ ನಿಪಿ.4 ರಿಂದ 6 ಎಂದು ಗುರುತಿಸಲಾಯಿತು. ಸಾಕಷ್ಟು ಪ್ರಯತ್ನ ಪಟ್ಟರು ಆರೋಪಿ ಯೋಗೇಶ್ ಪತ್ತೆಯಾಗಿರುವುದಿಲ್ಲ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).

ಸಾ.ಓ.ಹೇ.ಕೆ.ಸ.ಇ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ